ಮಾಡಬೇಕು. ಆಟೋ ಲೈಸೆನ್ಸ್ ಕೊಡುವಾಗ ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸ ಮಾಡಬೇಕು ಎಂದು ಕೊಡುತ್ತೀರಿ. ಲೈಸೆನ್ಸ್ ಕೊಡುವಾಗ ಹಾಕುವ ಪರತ್ತುಗಳನ್ನು ಕಟ್ಟುನಿಟ್ಟಾಗಿ ಅಳವಡಿಸುವಂತೆ ಅಧಿಕಾರಿಗಳಿಗೆ ಆಜ್ಞೆ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಪಾಟೀಲರು ಕೂಡ ಮಂತ್ರಿಗಳಾಗಿದ್ದವರು. ೧೯೭೩ ರಿಂದಲೂ ಆಜ್ಞೆಗಳು ಇವೆ. ಈಗ ಹೊಸದಾಗಿ ಆಜ್ಞೆ ಹೊರಡಿಸತಕ್ಕ ಅಗತ್ಯವಿಲ್ಲ. ಈ ಸಮಸ್ಯೆ ಬೆಂಗಳೂರಿನಲ್ಲಿ ಮಾತ್ರವಲ್ಲ. ಹುಬ್ಬಳ್ಳಿ, ಬೆಳಗಾಂನಲ್ಲೂ ಕೂಡ ಇದೆ. ನಾನು ಆಟೋ ಯೂನಿಯನ್ ನವರೊಡನೆ ಮಾತನಾಡಿದ್ದೇನೆ. ನನ್ನ ಮುಂದೆ ಮಾಡುತ್ತೇವೆಂದು ಹೇಳುತ್ತಾರೆ, ಆದರೆ ಮಾಡುವುದಿಲ್ಲ. ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರುಗಳು ಎಲ್ಲ ಆಟೋಗಳನ್ನು ಚೆಕ್ ಮಾಡಬೇಕೆಂದರೂ ಕಷ್ಟ.

ಶ್ರೀ ಕೆ. ಹೆಚ್. ಪಾಟೀಲ್.—ಶಾಸಕರಿಗೆ ಆ ಅಧಿಕಾರ ಕೊಡಿ, ಯಾರು ತಪ್ಪು ಮಾಡುತ್ತಾರೆ ಅವರ ಬಗ್ಗೆ ತಕ್ಷಣ ದೂರು ಕೊಡುವಂತೆ ಮಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸ್ಪೆಸಿಫಿಕ್ ಆಗಿ ಎಲ್ಲಿ ದೂರು ಬರುತ್ತದೆ ಅಂಥ ಆಟೋಗಳ ಲೈಸೆನ್ಸ್ ಅನ್ನು ರದ್ದು ಮಾಡುತ್ತೇವೆ. ಯಾರೇ ಆಗಲಿ ಸ್ಪೆಸಿಫಿಕ್ ಆಗಿ ದೂರು ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ, ಆದಷ್ಟು ಇರತಕ್ಕ ಕಾನೂನುಗಳನ್ನು ಕಾರ್ಯಾಚರಣೆಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈ ದಿಸೆಯಲ್ಲಿ ಸದಸ್ಯರು ಸಹಕಾರ ಕೊಡಬೇಕು.

ಕೌಟುಂಬಿಕ ನ್ಯಾಯಾಲಯವನ್ನು ಸ್ಥಾಪನೆ ಮಾಡುವ ಬಗ್ಗೆ.

೫೦೫. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕೌಟುಂಬಿಕ ವಿವಾದಗಳನ್ನು ಬಗೆಹರಿಸಲು ರಾಜ್ಯದಲ್ಲಿ ಕೌಟುಂಬಿಕ ನ್ಯಾಯಾಲಯ ಸ್ಥಾಪನೆ ಬಗ್ಗೆ ಸರಕಾರದವರು ಆಲೋಚಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಎಂದಿನಿಂದ ಆರಂಭಿಸಲಾಗುವುದು ?

ಇ) ಈ ಬಗ್ಗೆ ಕೇಂದ್ರ ಸರಕಾರದವರು ಸೂಚನೆಗಳನ್ನೇನಾದರೂ ರಾಜ್ಯ ಸರಕಾರದವರಿಗೆ ನೀಡಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಹೌದು.

ಆ) ಆದಷ್ಟು ಬೇಗ.

ಇ) ಹೌದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನನ್ನ (ಅ) ಪ್ರಶ್ನೆಗೆ ಹೌದು ಎಂದು ಹೇಳಿದ್ದೀರಿ. ಸಂತೋಷ. ಆ ನ್ಯಾಯಾಲಯವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸುತ್ತೀರಾ ಅಥವಾ ಪ್ರತಿ ಜಿಲ್ಲೆಗ ಒಂದೊಂದು ನ್ಯಾಯಾಲಯಗಳನ್ನು ಸ್ಥಾಪಿಸಿ ಅಲ್ಲೆಲ್ಲಾ ಮಂಹಿಳಾ ನ್ಯಾಯಾಧೀಶರನ್ನು ನೇಮಿಸುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಿರುವ ಕಾನೂನು ಪ್ರಕಾರ ಒಂದು ಮಿಲಿಯನ್‌ಗೂ ಜಾಸ್ತಿ ಜನಸಂಖ್ಯೆ ಇರತಕ್ಕ ಪಟ್ಟಣಗಳಲ್ಲಿ ನ್ಯಾಯಾಲಯವನ್ನು ಸ್ಥಾಪಿಸಬಹುದು. ಆದ್ದರಿಂದ ಬೆಂಗಳೂರಿನಲ್ಲಿ ಕೌಟುಂಬಿಕ ನ್ಯಾಯಾಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆ. ಕಾನೂನು ಅಡಿಯಲ್ಲಿ ರೂಲ್ಸ್ ಮಾಡಬೇಕಾಗಿದೆ. ಕರಡು ರೂಲ್ಸ್ ಮಾಡಿ ಹೈಕೋರ್ಟಿನವರ ಜೊತೆಯಲ್ಲಿ ಕನ್‌ಸಲ್ಟ್ ಮಾಡಬೇಕಾಗಿದೆ. ಅದನ್ನು ತಯಾರಿಸಿ ಹೈಕೋರ್ಟಿಗೆ ಕಳುಹಿಸಿದ್ದೇವೆ. ಅವರ ಒಪ್ಪಿಗೆಯ ನಂತರ ಮುಂದಿನ ಕ್ರಮ ತೆಗೆದುಕೊಂಡು ಬೇಗ ಬೆಂಗಳೂರಿನಲ್ಲಿ ಕೌಟುಂಬಿಕ ಕೋರ್ಟನ್ನು ಸ್ಥಾಪಿಸುವುದಕ್ಕೆ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಆದಷ್ಟು ಬೇಗ ಎಂದು ಉತ್ತರದಲ್ಲಿ ಹೇಳಿದ್ದೀರಿ. ಮತ್ತು ಈಗಲೂ ಹೇಳಿದಿರಿ. ಬೇಗ ಎಂದರೆ, ಹೈಕೋರ್ಟಿನಿಂದ ಅದು ಎಷ್ಟು ದಿನಗಳಲ್ಲಿ ಬರ ಬಹುದು ?

ಶ್ರೀ ಎ. ಲಕ್ಷ್ಮೀಸಾಗರ್.—ಹೈಕೋರ್ಟಿನವರು ಇಷ್ಟೇ ದಿನಗಳಲ್ಲಿ ಕೊಡಬೇಕೆಂದು ಹೇಳತಕ್ಕ ಅಧಿಕಾರ ಸರ್ಕಾರಕ್ಕಿಲ್ಲ. ಆದರೂ ಕೂಡ ಅವರು ಅಸ್ತೆ ವಹಿಸುತ್ತಿದ್ದಾರೆ, ಬೇಗ ಆಗಂತ್ತದೆಂದು ನಿರೀಕ್ಷಿಸಂತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಕೇಂದ್ರ ಸರ್ಕಾರದಿಂದ ಸೂಚನೆ ಬಂದಿದೆ ಎಂದಿದ್ದಾರೆ ರಾಜಾಸ್ಥಾನದಲ್ಲಿ ಆಗಲೇ ಫ್ಯಾಮಿಲಿ ಕೋರ್ಟ್ ಪ್ರಾರಂಭ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಓದಿರ ಬಹುದು. ಅಲ್ಲಿಂದ ವಿವರಣೆ ಏನಾದರೂ ತರಿಸಿಕೊಂಡಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ನಮಗೆ ಅದರ ಅವಶ್ಯಕತೆ ಇಲ್ಲ.

ಶ್ರೀ ಕೆ. ಬಿ. ಶಾಣಪ್ಪ.—(ಸದಸ್ಯರು ಹಾಜರಿಲ್ಲ.)

ಅಧ್ಯಕ್ಷರು.—ಮಾನ್ಯ ಕಾನಡೆಯವರೆ, ನಿಮ್ಮ ಪ್ರಶ್ನೆ ಬಂದೆ ಹೋಗಿದೆ, ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಟಿ. ಎಸ್. ಮಣಿ.—(ಸದಸ್ಯರು ಹಾಜರಿಲ್ಲ.)

ಹಂಕ್ಕೇರಿ ತಾಲ್ಲೂಕಿನಲ್ಲಿ ಸ್ಥಾಪನೆ ಗೊಳ್ಳುತ್ತಲಿರುವ ಹಿಂದೂಸ್ಥಾನ್ ಲೇಟೆಡ್ಸ್ ಇಂಡಿಯಾ ಲಿಮಿಟೆಡ್ ಬಗ್ಗೆ.

೧೮೩. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಭಾರಿ ಮಂತ್ರಿ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಲೇಟೆಕ್ಸ್ ಇಂಡಿಯಾ ಲಿಮಿಟೆಡ್‌ದಲ್ಲಿ ಒಟ್ಟಾರೆ ಕೆಲಸಕ್ಕೆ ಬೇಕಾಗಿರುವ ಪಾಯಂ ನೌಕರರ ಸಂಖ್ಯೆ ಎಷ್ಟು ?

ಆ) ಈ ಸಂಸ್ಥೆಗೆ ಕರ್ನಾಟಕದಿಂದ ಕಡ್ಡಾಯವಾಗಿ ನೌಕರರನ್ನು ನೇಮಕಾತಿ ಮಾಡಂವಂತೆ ಸರ್ಕಾರದಿಂದ ಆದೇಶ ಕೊಟ್ಟಿರುವುದು ನಿಜವೇ ?

ಇ) ಹಿಂದೂಸ್ಥಾನ್ ಲೇಟೆಕ್ಸ್ ಇಂಡಿಯಾ ಲಿಮಿಟೆಡ್‌ಕ್ಕೆ ಶಾಶ್ವತ ವಿದ್ಯುತ್ ಪೂರೈಕೆಗಾಗಿ ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಈ) ಸಂಕೇಶ್ವರ ಮಂತ ಕ್ಷೇತ್ರದಲ್ಲಿ ಬರುವ ನಿರುದ್ಯೋಗಿ ಪದವೀಧರರಿಗಾಗಿ ಹಾಗೂ ಇನ್ನುಳಿದ ನೌಕರಿಗಾಗಿ ಮೂಸಲಾತಿ ಇಟ್ಟಿರುವ ಹುದ್ದೆಗಳ ಪ್ರಮಾಣ ವೆಷ್ಟು ?

ಉ) ಕಾರ್ಖಾನೆ ಪ್ರಾರಂಭವಾಗುವ ನಿಶ್ಚಿತ ದಿನಾಂಕ ಯಾವುದು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮಂತ್ರಿ ಮಧ್ಯಮ ಕೈಗಾರಿಕಾ ಸಚಿವರು). —

ಅ) ೪೮೦.

ಆ) ಇಲ್ಲ.

ಇ) ಈ ಘಟಕಕ್ಕೆ ಬೇಕಾದ ವಿದ್ಯುತ್ತನ್ನು ಒದಗಿಸಲಾಗುವುದು.

ಈ) ಇಲ್ಲ.

ಉ) ನವೆಂಬರ್ ೧೯೮೬ ರಲ್ಲಿ ಉತ್ಪಾದನೆ ಪ್ರಾರಂಭವಾಗಬಹುದು.